<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರು.</u>

ಸಿಸಿ ಸಂಖ್ಯೆ: 297/2016

ಪಿಡಬ್ಲ್ಯೂ: 07 ಸಿಡಬ್ಲ್ಯೂ : 09
ದಿನಾಂಕ: 07.11.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಡಾ: ಸವಿತಾ ಮುರಳಿ |
| ಗಂಡನ ಹೆಸರು | - ಪ್ರಕಾಶ |
| ವಯಸ್ಸು | - 40 ವರ್ಷ |
| ಉದ್ಯೋಗ | - ಖಾಸಗಿ ವೈದ್ಯರು |
| ವಾಸ ಸ್ಥಳ | - ಸವಣೂರು |

<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ.</u>

ನಾನು ಆರೋಪಿ ನಡೆಸುತ್ತಿದ್ದ ಸಲೀಂ ಕ್ಲಿನಿಕನಲ್ಲಿ ವೈದ್ಯರು ಅಂತಾ ಕೆಲಸ ಮಾಡುತ್ತಿರಲಿಲ್ಲ. ಆಗ ಎಂದರೆ ಸುಮಾರು 7 ವರ್ಷದ ಹಿಂದೆ ಟಿ ಎಚ್ ಓ ಅವರು ನನ್ನನ್ನು ಕರೆದಿದ್ದರು ಈ ಕುರಿತು ಕೇಳಿದಾಗ ನಾನು ಆರೋಪಿ ಜೊತೆ ಕ್ಲಿನಿಕನಲ್ಲಿ ಕೆಲಸ ಮಾಡುತ್ತಿಲ್ಲ ಅಂತಾ ಹೇಳಿದ್ದೇನೆ, ಮತ್ತು ಟಿ ಎಚ್ ಓ ಅವರಿಗೆ ಲಿಖಿತವಾಗಿ ಬರೆದುಕೊಟ್ಟಿರುತ್ತೇನೆ. ಈ ಕುರಿತು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ. ಈಗ ನಾನು ನೋಡುತ್ತಿರುವ ದಾಖಲೆ ನಾನು ಟಿ ಎಚ್ ಓ ಅವರಿಗೆ ನೀಡಿರುವ ಪತ್ರ ಆಗಿರುತ್ತದೆ ಅದನ್ನು ನಿಪಿ-3 ಎಂದು, ಗುರುತಿಸಲಾಯಿತು.

<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್ ಕೆ ವಕೀಲರಿಂದ</u>

ನಾನು ಬಿ ಎ ಎಂ ಎಸ್ ಮುಗಿಸಿರುತ್ತೇನೆ. 2006 ರಲ್ಲಿ ಬಿ ಎ ಎಂ ಎಸ್ ಮುಗಿಸಿರುತ್ತೇನೆ. ನಾನು 2006 ರಿಂದ ಬಿಜಾಪುರದಲ್ಲಿಯೇ ಕೆಲಸ ಮಾಡುತ್ತಿದ್ದೆ. 2011 ರವರಿಗೆ ಬಿಜಾಪುರದಲ್ಲಿಯೇ ಕೆಲಸ ಮಾಡಿದ್ದೆನೆ. ನಾನು ನನ್ನ ಗಂಡನ ಕ್ಲಿನಿಕನಲ್ಲಿ ಕೆಲಸ ಮಾಡಿದ್ದೇನೆ. 2011 ರಿಂದ ಸವಣೂರಿಗೆ ಬಂದಿರುತ್ತೇನೆ. 2011 ರಲ್ಲಿ ಪ್ರಾಕ್ಟಿಸ್ ಮಾಡುವ ಸಲುವಾಗಿಯೇ ಸವಣೂರಿಗೆ ಬಂದಿರುತ್ತೇನೆ. 2011 ರಲ್ಲಿ ಒಂದು ವರ್ಷ ಆರೋಪಿಯ ಕ್ಲಿನಿಕನಲ್ಲಿ ಕೆಲಸ ಮಾಡಿದ್ದೇನೆ, ನಂತರ ನಾನು ಸ್ವಂತ ಕ್ಲಿನಿಕ ಹಾಕಿಕೊಂಡಿದ್ದೇನೆ. 2011 ರಿಂದ 2012 ರವರೆಗೆ ಆರೋಪಿಯ ಸಲೀಂ ಕ್ಲಿನಿಕನಲ್ಲಿ ಕೆಲಸ ಮಾಡಿದ್ದೇನೆ ಎಂದರೆ ಸರಿ. ನಾನು ಆರೋಪಿಯ ಕ್ಲಿನಿಕನಲ್ಲಿ ಕೆಲಸ ಮಾಡಿದ್ದರಿಂದ ನಿಡಿ-1 ರಂತೆ ಆರೋಪಿ ನೊಂದಣಿ ಮಾಡಿಸಿದ್ದ

ಎಂದರೆ ಸರಿಯಲ್ಲ, ನನಗೆ ಈ ಕುರಿತು ಮಾಹಿತಿ ಇರುವುದಿಲ್ಲ. ನಾನು ನನ್ನ ಸ್ವಂತ ಕ್ಲಿನಿಕನ್ನು 2013 ರಲ್ಲಿ ರಿಜಿಸ್ಟೇಷನ್ ಮಾಡಿದ್ದೇನೆ. ನನ್ನ ಕ್ಲಿನಿಕನ ಹೆಸರು ಓಂ ಸಾಯಿಕ್ಲಿನಿಕ. ನಾನು ಆರೋಪಿಯ ಕ್ಲಿನಿಕನಲ್ಲಿ ಕೆಲಸ ಮಾಡುವಾಗ ರಿಸ್ಟೈನ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನನಗೆ ರಿಸ್ಟೈನ ಮಾಡುವುದು ಗೊತ್ತಿರಲಿಲ್ಲ ಮತ್ತು ಆರೋಪಿ ರಿಜ್ಟ್ಸೇಷನ ಮಾಡಿಸಿರುವುದೇ ಹೇಳಿಲ್ಲ ಅಂತಾ ನುಡಿಯುತ್ತಾರೆ. ನಾನು 2013-14 ರಲ್ಲಿ ರಿಜ್ಟ್ಸೇಷನ ಮಾಡಿಸಿ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ. ರಿಜ್ಟ್ಸೇಷನ ನಂಬರು ನೆನಪಿಲ್ಲ. ರಿಜಿಸ್ಟ್ರೇಷನ ಮಾಡಲು ನನ್ನ ಡಿಗ್ರಿಯ ಎಲ್ಲಾ ಸರ್ಟಿಫಿಕೇಟುಗಳನ್ನು ಮತ್ತು ಚುನಾವಣಾ ಗುರುತಿನ ಚೀಟಿ ಮತ್ತು ಅರ್ಜಿಯೊಂದಿಗೆ ನೀಡಬೇಕು. ನಾನು ಈಗಲೂ ಸಹ ಖಾಸಗಿಯಾಗಿ ಪ್ರಾಕ್ಟಿಸ್ ಮಾಡುತ್ತಿದ್ದೇನೆ ಎಂದರೆ ಸರಿ. ಈಗಲೂ ಸಹ 2013-14 ರಲ್ಲಿ ಮಾಡಿಸಿದ ನೊಂದಣಿಯ ಮೇಲೆ ಪ್ರತಿ ಸಲ ರಿನಿವಲ್ ಮಾಡಿಕೊಂಡು ಪ್ರಾಕ್ಟಿಸ್ ಮಾಡುತ್ತಿದ್ದೇನೆ. ನನಗೆ ರಿನಿವಲ್ ಮಾಡಲು ನಿಡಿ-2 ರಂತೆ ನೆನಪೋಲೆ ಬಂದಿರುತ್ತದೆ ಎಂದರೆ ಸರಿಯಲ್ಲ, ಅದು ನನಗೆ ಬಂದಿಲ್ಲ. ನಾನು ನಿಪಿ-3 ನ್ನು ಆರೋಪಿಯ ಕ್ಲಿನಿಕಗೆ ದಾಳಿ ಮಾಡಿದಾಗ ನನ್ನನ್ನು ಕರೆದಿದ್ದರು, ಆಗ ಬರೆದುಕೊಟ್ಟಿರುತ್ತೇನೆ. ಸದರಿ ದಾಳಿ ನಡೆದಾಗ ನಾನು ಓಂ ಕ್ಲಿನಿಕನಲ್ಲಿ ಇದ್ದೆ. ನನ್ನ ಕ್ಲಿನಿಕ ಕಸಬಾ ಪೇಟೆ ಸವಣೂರಿನಲ್ಲಿರುತ್ತದೆ. ನನ್ನನ್ನು ಟಿ ಎಚ್ ಓ ಅವರು ಕರೆದಿದ್ದಾರೆ ಅಂತಾ ಹೇಳಿ ಆರೋಪಿಯ ಸಹೋದರ ಕರೆಯಲು ಬಂದಿದ್ದ. ನಾನು ಆರೋಪಿಯ ಆಸ್ಪತ್ರೆಗೆ ಹೋದಾಗ ಅಂದಾಜು ಮದ್ಯಾಹ್ನ 1.00 ರಿಂದ 1.30 ಆಗಿರಬಹುದು. ನಾನು ಒಂದು ವರ್ಷ ಮಾತ್ರ ಆರೋಪಿಯ ಕ್ಲಿನಿಕನಲ್ಲಿ ಕೆಲಸ ಮಾಡಿದ್ದೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2011 ರಿಂದ ದಾಳಿಯಾಗುವವರೆಗೂ ಅದೇ ಕ್ಲಿನಿಕನಲ್ಲಿ ಕೆಲಸ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾಳಿಯಾಗುವ ಸಮಯದಲ್ಲಿ ಆರೋಪಿಯ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದೆ ಎಂದರೆ ಸರಿಯಲ್ಲ. ಟಿ ಎಚ್ ಓ ಮತ್ತು ಡಿ ಎಚ್ ಓ ಅವರು ನಿನ್ನ ಮೇಲೆ ಯಾವುದೇ ಕೇಸು ಮಾಡುವುದಿಲ್ಲ, ನಿಪಿ-3 ರಂತೆ ಬರೆದುಕೊಡಿ ಅಂತಾ ಕೇಳಿದರು ಎಂದರೆ ಸರಿಯಲ್ಲ. ನನ್ನ ಗಂಡ ಆರೋಪಿಯ ಸಹಾರಾ ನರ್ಸಿಂಗ್ ಹೋಂ ಕ್ಲಿನಿಕನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ 5-6 ತಿಂಗಳು ಮಾಡಿ ಬಿಟ್ಟಿರುತ್ತಾರೆ. 2011 ರಲ್ಲಿ ಡಾಃ ಬಲ್ಕಿಸ್ ಎಂಬುವವರ ಮೂಲಕ ನಾನು ಆರೋಪಿಯ ಕ್ಲಿನಿಕನಲ್ಲಿ ಸೇರದ್ದೆ ಎನ್ನುವುದು ಸರಿ. ದಾಳಿ ಕಾಲಕ್ಕೆ ಟಿ ಎಚ್ ಓ ಮತ್ತು ಡಿ ಎಚ್ ಓ ಅವರು ನಿಡಿ-1 ನ್ನು ತೋರಿಸಿದಾಗ ನಾನು ಅದರ ಬಗ್ಗೆ ನನಗೆ ಮಾಹಿತಿನೇ ಇಲ್ಲ ಅಂತಾ ಹೇಳಿರುತ್ತೇನೆ ಎಂದರೆ ಸರಿ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು. ಸವಣೂರು.